ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 490/2018**

**ಪ್ರಾಸಾ- 10 ಅಧಿಕ ಸಾಕ್ಷಿ -1**

ಸಾಕ್ಷಿದಾರರ ಹೆಸರುಃ : ಶ್ರೀವಿದ್ಯಾ

ಗಂಡನ ಹೆಸರುಃ : ದಿವಾಕರ್

ವಯಸ್ಸುಃ : 5 ವರ್ಷ

ಉದ್ಯೋಗಃ : ಸಹಾಯಕ ನಿರ್ದೇಶಕರು ಎಫ್ ಎಸ್ ಎಲ್

ವಾಸ : ಬೆಂಗಳೂರು

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 05-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 23-ಫೆಬ್ರವರಿ 2004 ರಿಂದ ಇಲ್ಲಿಯವರೆಗೆ ಬೆಂಗಳೂರು ಎಫ್. ಎಸ್ ಎಲ್ ನಲ್ಲಿ ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿನಾಂಕ 19-5-17ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನ ಎಸಿಬಿ ಕಛೇರಿಯ ಮೊಕದ್ದಮೆ ಸಂಖ್ಯೆ 1/17ಕ್ಕೆ ಸಂಬಂಧಿಸಿದಂತೆ 3 ಸೀಲು ಮಾಡಿದ ವಸ್ತುಗಳನ್ನು ಮಾದರಿ ಸೀಲಿನೊಂದಿಗೆ ಶ್ರೀಮತಿ ಪುಷ್ಪಲತಾರವರ ಮೂಲಕ ಕೋರಿಕೆ ಪತ್ರದೊಂದಿಗೆ ಸ್ವಾಗತ ವಿಭಾಗದಲ್ಲಿ ಪಡೆದಿದ್ದರು. ಅದೇ ದಿನ ನನಗೆ ವಿಶ್ಲೇಷಣೆಗಾಗಿ ಕಳುಹಿಸಿರುತ್ತಾರೆ. ಅದನ್ನು ಪರಿಶೀಲಿಸಿದಾಗ ಆ ಸೀಲಾದ ವಸ್ತುಗಳ ಮೇಲಿದ್ದ ಸೀಲು ಮತ್ತು ಮಾದರಿ ಸೀಲು ಹೋಲಿಕೆಯಾಗುತ್ತಿತ್ತು, ಸೀಲು ಸುಸ್ಥಿತಿಯಲ್ಲಿತ್ತು. ಸದರಿ ಮೂರು ವಸ್ತುಗಳಿಗೆ ತನಿಖಾಧಿಕಾರಿಯು 4, 15, 16 ಎಂದು ಕ್ರಮಸಂಖ್ಯೆ ನೀಡಿದ್ದರು. ನಾನು ಅದೇ ಕ್ರಮಸಂಖ್ಯೆ ಆಧಾರದಲ್ಲಿ ವಿಶ್ಲೇಷಣೆಗೊಳಪಡಿಸಿರುತ್ತೇನೆ. ಕ್ರಮಸಂಖ್ಯೆ 4ನ್ನು ತೆರೆದು ನೋಡಿದಾಗ ಅದರಲ್ಲಿ ಪಿರ್ಯಾದಿ ಮತ್ತು ಆರೋಪಿತರದ್ದೆನ್ನುವ ಸಂಭಾಷಣೆ ಇದೆ ಎಂದು ಹೇಳಲಾದ ಸಂಭಾಷಣೆ ಇರುವ ಒಂದು ಮೊಮೋ ಕಾರ್ಡ್ ಇತ್ತು. ಇತ್ತು. ಕ್ರಮಸಂಖ್ಯೆ 15ನ್ನು ತೆರೆದು ನೋಡಿದಾಗ ಅದರಲ್ಲಿ ಒಂದು ದೂರುದಾರರು ಮತ್ತು ಆರೋಪಿತರ ನಡುವಿನ ಸಂಭಾಷಣೆ ಇದೆ ಎನ್ನಲಾದ ಸಿಡಿ ಇತ್ತು. ಕ್ರಮಸಂಖ್ಯೆ 16ನ್ನು ತೆರೆದು ನೋಡಿದಾಗ ಅದರಲ್ಲಿ ಆರೋಪಿತರ ಮಾದರಿ ಧ್ವನಿ ಇದೆ ಎನ್ನುವ ಸಿಡಿ ಇತ್ತು. ಇವೆಲ್ಲವನ್ನು ವಿಶ್ಲೇಷಣೆಗೊಳಪಡಿಸಿದಾಗ

ಕ್ರಮಸಂಖ್ಯೆ 4 ಮತ್ತು 15 ರಲ್ಲಿರುವ ಮನು ಎಂಬುವವರ ಧ್ವನಿ ವಸ್ತುಸಂಖ್ಯೆ 16ರಲ್ಲಿದ್ದ ಮನು ಎಂಬುವವರ ಧ್ವನಿಗೆ ಹೋಲಿಕೆಯಾಗುತ್ತಿತ್ತು. ಅದು ಒಂದೇ ವ್ಯಕ್ತಿಯ ಧ್ವನಿಯಾಗಿರುತ್ತದೆ. ಹಾಗೆಯೇ ವಸ್ತುಸಂಖ್ಯೆ 4 ಮತ್ತು 15ರಲ್ಲಿದ್ದ ಸೌಮ್ಯ ಎಂಬುವವರ ಧ್ವನಿಯು ವಸ್ತುಸಂಖ್ಯೆ 16ರಲ್ಲಿದ್ದ ಸೌಮ್ಯ ಎಂಬುವವರ ಧ್ವನಿಗೆ ಹೋಲಿಕೆಯಾಗುತ್ತಿತ್ತು ಮತ್ತು ಅದು ಒಬ್ಬರೇ ವ್ಯಕ್ತಿಯ ಧ್ವನಿಯಾಗಿರುತ್ತದೆ. ಈ ವಿಚಾರವನ್ನು ನಮೂದಿಸಿ ನನ್ನ ಪರೀಕ್ಷಾ ವರದಿಯನ್ನು ನಿಪಿ-49 ರಂತೆ ನೀಡಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-49(ಎ) ಎಂದುಗುರುತಿಸಲಾಯಿತು. ಪರೀಕ್ಷಿಸಿದ ಈ ಮೂರೂ ವಸ್ತುಗಳನ್ನು ಮರುಪ್ಯಾಕು ಮಾಡಿ ಸೀಲು ಮಾಡಿ ಮಾದರಿ ಸೀಲಿನೊಂದಿಗೆ ಸಂಬಂಧಪಟ್ಟವರಿಗೆ ಕಳುಹಿಸಿರುತ್ತೇನೆ. ಆ ಮಾದರಿ ಸೀಲನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-49(1) ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-49(1ಎ) ಎಂದು ಗುರುತಿಸಲಾಯಿತು. ನಾನು ಪರೀಕ್ಷಿಸಿದ 2 ಸಿಡಿ ಮತ್ತು ಮೆಮೊರಿ ಕಾರ್ಡನ್ನು ನೋಡಿದರೆ ಗುರುತಿಸುತ್ತೇನೆ. ಸಿಡಿಗಳನ್ನು ನೋಡುತ್ತಿದ್ದು ಅವುಗಳು ಈಗಾಗಲೇ ನಿಪಿ-5 ಮತ್ತು 37 ಎಂದು ಗುರುತಿಸಲ್ಪಟ್ಟಿರುತ್ತದೆ.

(ಮಾನ್ಯ ಅಭಿಯೋಜಕರು ನ್ಯಾಯಾಲಯದ ಮುಂದೆ ಇರುವ ಕವರಿನಿಂದ ಪ್ಯಾಕು ಮಾಡಿರುವ 1 ವಸ್ತುವನ್ನು ತೆರೆಯಲು ಅನುಮತಿ ಕೋರಿದ್ದು, ಅನುಮತಿ ನೀಡಿದೆ) ಕವರಿನಿಂದ ಪ್ಯಾಕು ಮಾಡಿದ 1 ಪ್ಯಾಕನ್ನು ತೆರೆದು ತೋರಿಸಿದಾಗ ಅದರೊಳಗಿರುವ ಕ್ರಮಸಂಖ್ಯೆ 4 ರ ಮೆಮೊರಿ ಕಾರ್ಡ್ ನ್ನು ನೋಡಿ ಇದೆ ಎಂದು ಗುರುತಿಸಿರುತ್ತಾರೆ. ಅದನ್ನು ನಿಪಿ-50 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ 2ನೇ ಆರೋಪಿ ಪರ ಶ್ರೀ ಡಿ ಹೆಚ್ ಎಲ್ ವಕೀಲರಿಂದಃ</u>

ವಾಯ್ಸ್ ರೆಕಾರ್ಡರನ್ನು ನನಗೆ ಕಳುಹಿಸಿದ್ದರೆ ಅದು ಒರಿಜಿನಲ್ ಅಲ್ಲವೋ ಎಂದು ನನಗೆ ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ. ವಾಯ್ಸ್ ರೆಕಾರ್ಡರ್ ನಿಂದ ಸಿಡಿಗೆ ವರ್ಗಾಯಿಸುವ ಸಂದರ್ಭದಲ್ಲಿ ಟ್ಯಾಂಪರ್ ಮಾಡುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಷ್ಟು ಸುಲಭವಾಗಿ ಮಾಡಲಾಗುವುದಿಲ್ಲ ಒಂದು ವೇಳೆ ಮಾಡಿದರೆ ನಮ್ಮ ಪರೀಕ್ಷೆಯಲ್ಲಿ ಕಂಡುಬರುತ್ತದೆ ಮತ್ತು ವರ್ಗಾವಣೆ ಮಾಡುವಾಗ ಅದಕ್ಕೆ ಸಂಬಂಧಪಟ್ಟ software ಬಳಸಬೇಕಾಗುತ್ತದೆ ಎನ್ನುತ್ತಾರೆ. ನನಗೆ ಸಲ್ಲಿಸಿದ ಮನವಿಯಲ್ಲಿ ಆ ಸಿಡಿಯನ್ನು ಇಂತಹ software ಬಳಸಿ ವರ್ಗಾಯಿಸಲಾಗಿದೆ ಎಂದು ಹೇಳಿಲ್ಲ. ಸಾಕ್ಷಿಯು ಮುಂದುವರೆದು ಮೆಮೋರಿ ಕಾರ್ಡ್ ನಿಂದ ಸಿಡಿಗೆ ಸಂಭಾಷಣೆ ವರ್ಗಾಯಿಸುವಾಗ software ಬಳಸುವ ಅವಶ್ಯಕತೆ ಇಲ್ಲ ಎನ್ನುತ್ತಾರೆ. ಮೆಮೋರಿ ಕಾರ್ಡನ್ನು ನನಗೆ ಕಳುಹಿಸುವಾಗ ಇದರಲ್ಲಿ ಯಾವುದೂ ಟ್ಯಾಂಪರ್ ಆಗಿಲ್ಲ ಕೇಬಲ್ ಮೂಲಕವೇ ಮಾಡಲಾಗಿದೆ ಎಂದು ಬರೆದು ಕಳುಹಿಸಿಲ್ಲ ಎಂದರೆ ನಿಜ. ಮೆಮೋರಿ ಕಾರ್ಡ್ ನಲ್ಲಿ ವಾಯ್ಸ್ ರೆಕಾರ್ಡ್ ಬಿಟ್ಟರೆ ಬೇರೆ ಏನೂ ಇರಲಿಲ್ಲ. ಕಂಪ್ಯೂಟರ್ನಿಂದ ಮೆಮೋರಿ ಕಾರ್ಡ್ ಗೆ ಯಾವುದೇ ಸಂಭಾಷಣೆ ಫೋಟೋ ಕಳುಹಿಸಬಹುದು ಎಂದರೆ ನಿಜ. ನನ್ನ ವರದಿಯಲ್ಲಿ ನಾನು ಮೆಮೋರಿ ಕಾರ್ಡ್ನಲ್ಲಿರುವ ಸಂಭಾಷಣೆ ಅದರಲ್ಲೇ ರೆಕಾರ್ಡ್ ಆಗಿರುವುದು ಯಾವುದೇ ಸಿಸ್ಟಂನಿಂದ ವರ್ಗಾಣೆಯಾಗಿರುವುದಿಲ್ಲ ಎಂದು ಬರೆದಿರುವುದಿಲ್ಲ ಎಂದರೆ ಸರಿ. ಮೆಮೋರಿ ಕಾರ್ಡ್ ನಲ್ಲಿ ಸಂಭಾಷಣೆ

ದಾಖಲಾದ ದಿನಾಂಕ ಮತ್ತು ಸಮಯ ಇರುತ್ತದೆ ಎಂದರೆ ಸರಿ. ನನ್ನ ವರದಿಯಲ್ಲಿ ಮೆಮೋರಿ ಕಾರ್ಡ್ ನಲ್ಲಿ ದಾಖಲಾದ ಸಂಭಾಷಣೆಯ ಅವಧಿಯನ್ನು ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಾಗೆಯೇ ಮೆಮೋರಿ ಕಾರ್ಡ್ ನ ಸಂಭಾಷಣೆಯ ದಿನಾಂಕ ಮತ್ತು ಸಮಯವನ್ನು ನನ್ನ ವರದಿಯಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ಕಂಪ್ಯೂಟರ್ನಿಂದ ಸಿಡಿಗೆ ವರ್ಗಾವಣೆ ಮಾಡಿದರೆ modification and created dates ಬರುತ್ತದೆ ಎಂದರೆ ಸರಿ. ನಾನು modification and created dates ಗಳನ್ನು ನನ್ನ ವರದಿಯಲ್ಲಿ ನಮೂದಿಸಿಲ್ಲ ಎಂದರೆಸ ರಿಯಲ್ಲ. ನನಗೆ ಇಂತಹ ದಿವಸ ಕ್ರಿಯೇ ಟ್ ಮಾಡಿದ್ದೇವೆ ಮತ್ತು ಮಾಡಿಫಿಕೇಶನ್ ಮಾಡಿದ್ದೇವೆಂದು ತಿಳಿಸಿಲ್ಲ ಎಂದರೆ ನಿಜ. ಲೋಕಾಯುಕ್ತ ಪೊಲೀಸರು ಇದೇ ರೀತಿ ವರದಿ ನೀಡಬೇಕೆಂದು ಕೇಳಿದ್ದರಿಂದ ನಾನು ವರದಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

3.ತಂತ್ರಾಂಶದ ಸಹಾಯದಿಂದ ಮತ್ತು ಗ್ರಹಿಕೆ ಮಾಡಿ ವರದಿಯನ್ನು ನೀಡುತ್ತೇವೆ. Multispeech ಎಂಬ ತಂತ್ರಾಂಶವನ್ನು ಬಳಸಿರುತ್ತೇನೆ ತುಂಬಾ ವಿರಳ ಸಕೇಸುಗಳಲ್ಲಿ 2 ವ್ಯಕ್ತಿಯ ಧ್ವನಿಗಳು ಒಂದೇ ರೀತಿ ಇರುತ್ತವೆ ಎಂದರೆಸ ರಿಯಲ್ಲ. ಒಬ್ಬ ವ್ಯಕ್ತಿಯ ಧ್ವನಿಯನ್ನು ಮಿಮಿಕ್ರಿ ಮಾಡುವ ಸಾಧ್ಯತೆ ಇದೆ ಎಂದರೆ ಸರಿ. ಸಾಕ್ಷಿ ಆ ಅನುಕರಣೆ ಪರೀಕ್ಷೆಯಲ್ಲಿ ಗೊತ್ತಾಗುತ್ತದೆ ಎನ್ನುತ್ತಾರೆ.

(1ನೇ ಆರೋಪಿತರ ಪರ ವಕೀಲರು ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ, ಅನುಮತಿಸಿದೆ)

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**